ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ,
ಆನೇಕಲ್

ಒ.ಎಸ್. ನಂಬರ್ : 134/2011

ಪಿ.ಡಬ್ಲ್ಯು : 1
ಪ್ರಮಾಣ ವಚನ ಬೋಧಿಸಲಾಯಿತು :
ದಿನಾಂಕ : 20.08.2018

ಪಾಟೀ ಸವಾಲು : ಶ್ರೀ ವಿ.ಪಿ.ಎಸ್.ವಕೀಲರಿಂದ ಪ್ರತಿವಾದಿ ಪರ.

ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ವಕೀಲರ ಮೂಲಕ ನಿಪಿ 3 ರಂತೆ ನೋಟಿಸ್ ಕಳುಹಿಸಿದ್ದೇನೆ. ಪ್ರತಿವಾದಿ ನಿಪಿ 8 ರಂತೆ ನನಗೆ ಒಂದು ನೋಟಿಸ್ ಕಳುಹಿಸಿದ್ದರು ಎಂದರೆ ಸರಿ. ನಿಪಿ 8 ರ ನೋಟಿಸ್ ನಲ್ಲಿ ಕೇಳಿದಂತೆ ದಿನಾಂಕ 24.07.1989 ಮತ್ತು 09.02.2010 ರ ಕರಾರಿನ ಪ್ರತಿಗಳನ್ನು ಪ್ರತಿವಾದಿಗೆ ಕಳುಹಿಸಿದ್ದೇನೆ. ದಿನಾಂಕ ನೆನಪಿಲ್ಲ. ಈ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ಈ ಬಗ್ಗೆ ನಾವು ದಾವೆಯನ್ನು ಹೂಡಿರುತ್ತೇವೆ. ನಿಪಿ 1 ರಂತೆ 31.12.1989 ರ ಒಳಗೆ ಬಾಕಿ ಹಣ ಕೊಟ್ಟು ಕ್ರಯಪತ್ರ ಮಾಡಿಸಿಕೊಳ್ಳಬೇಕೆಂಬ ಷರತ್ತು ಇತ್ತು ಎಂದರೆ ಸರಿ. ಸದರಿ ದಿನಾಂಕದ ಒಳಗೆ ಕ್ರಯಪತ್ರ ಬರೆದುಕೊಂಡಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಗಳು ದಿನಾಂಕ ಮುಂದೂಡುತ್ತಿದ್ದರು ಎನ್ನುತ್ತಾರೆ. ನಿಪಿ 1 ರಂತೆ ನಿಗದಿಪಡಿಸಿದ ಅವಧಿಯೊಳಗೆ ಬಾಕಿ ಹಣ ಪಾವತಿಸಲು ನನ್ನ ಬಳಿ ಹಣ ಇದ್ದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನಂಬಿಕೆಯಿಂದ ಮುಂದೂಡಿದೆವು ಎನ್ನುತ್ತಾರೆ. ನಿಪಿ 1 ರ ಹಿಂಬದಿಯಲ್ಲಿ ದಿನಾಂಕ 02.11.1989 ರ ಬರವಣಿಗೆ ಇರುವ ಕಡೆ ಯಾವುದೇ ಷರಾ ನಮೂದು ಮಾಡಿಲ್ಲ ಮತ್ತು ಯಾವುದೇ ಸಹಿ ಇರುವುದಿಲ್ಲ ಎಂದರೆ ಸರಿ. ನಂಬಿಕೆಯ ಮೇಲೆ ಕೊಟ್ಟಿದ್ದೇವೆ. ನಿಪಿ 1 ರ ಕರಾರು ಕಾಲಾವಧಿ ಪರಿಮಿತಿ ಮುಗಿದು ಹೋಗಿರುತ್ತದೆ ಎಂದರೆ ಸರಿ. ವೆಂಕಟರಮಣಪ್ಪರವರಿಗೆ ಪುಷ್ಪಾ ಎಂಬ ಮಗಳು ಇದ್ದಾರೆಂದರೆ ಸರಿ. ನಿಪಿ 2 ರ ಕರಾರಿಗೆ ಪ್ರತಿವಾದಿ ನಂ. 1 ಮತ್ತು 2 ರವರು ಸಹಿ ಮಾಡಿಲ್ಲ ಮತ್ತು ಅವರ ಸಹಿಗಳನ್ನು ಮತ್ತು ಕರಾರನ್ನು ಸೃಷ್ಟಿಸಿಕೊಂಡಿದ್ದೇನೆಂದರೆ ಸರಿಯಲ್ಲ. ನಿಪಿ 2 ರಲ್ಲಿ ಸಾಕ್ಷಿಗಳ ಸಹಿಯನ್ನು ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ದಿನಾಂಕ 09.02.2010 ರಂದು ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ. 1, 2 ಮತ್ತು ಪುಷ್ಪಾ ರವರು ರಾಜಣ್ಣರವರಿಗೆ ದಿನಾಂಕ 14.10.2010 ರಂದು ನೊಂದಾಯಿತ ಮೊಖ್ತ್ಯಾರು ನಾಮೆಯನ್ನು ಬರೆದುಕೊಟ್ಟು ದಿನಾಂಕ 27.11.2010 ರಂದು ಕೃಷ್ಣಪ್ಪರವರಿಗೆ 15 ಲಕ್ಷ ರೂಪಾಯಿಗಳಿಗೆ ಕ್ರಯದ ಕರಾರು

ಮಾಡಿಕೊಟ್ಟಿದ್ದಾರೆಂದರೆ ಸರಿಯಲ್ಲ. ಈ ವಿಚಾರವನ್ನು ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದಾನೆಂದರೆ ಸರಿಯಲ್ಲ. ಈ ಬಗ್ಗೆ ನನಗೆ ಗೊತ್ತಿದ್ದರೂ ಕೂಡ ಕೃಷ್ಣಪ್ಪರವರ ಮೇಲೆ ಯಾವುದೇ ಪ್ರಕರಣ ದಾಖಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರತಿವಾದ ಪತ್ರಕ್ಕೆ ನಾನು ಯಾವುದೇ ರಿಜಾಯಿಂಡರ್ ಸಲ್ಲಿಸಿಲ್ಲ. ನಿಪಿ 2 ರಂತೆ ನಾನು 86,000/- ರೂಗಳನ್ನು ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 2010 ರಲ್ಲಿ ದಾವಾ ಆಸ್ತಿಯ ಮೌಲ್ಯ 15 ಲಕ್ಷ ರೂಪಾಯಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಕರಾರು ಪತ್ರವನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿದ್ದೇನೆಂದರೆ ಸರಿಯಲ್ಲ. ನಿಪಿ 2 ನ್ನು ಪ್ರತಿವಾದಿಗಳು 1,32,000/- ರೂಪಾಯಿಗಳಿಗೆ ಕರಾರು ಬರೆದುಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ 1 ಮತ್ತು 2 ರ ಕರಾರು ಪತ್ರಗಳನ್ನು ನಾನು ಸೃಷ್ಟಿಸಿಕೊಂಡಿರುವುದರಿಂದ ಅವುಗಳನ್ನು ನಿಪಿ 8 ರ ನೋಟಿಸ್ ನೀಡಿದರು ಕೂಡ ಪ್ರತಿವಾದಿಗಳಿಗೆ ನೀಡಿರಲಿಲ್ಲ ಎಂದರೆ ಸರಿಯಲ್ಲ. ಟಿ.ಎಸ್. ಕೃಷ್ಣಪ್ಪರವರಿಗೆ ಕ್ರಯದ ಕರಾರು ಬರೆದುಕೊಟ್ಟಿರುವುದರಿಂದ ಆಸ್ತಿಯನ್ನು ಕಬಳಿಸಲು ನಾನು ಸುಳ್ಳು ಕರಾರುಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿದ್ದೇನೆಂದರೆ ಸರಿಯಲ್ಲ. ನಾನು ನಿಪಿ 1 ಮತ್ತು 2 ರಂತೆ ನಾನು ಬಾಕಿ ಕ್ರಯದ ಮೊಬಲಗನ್ನು ನೀಡಿ ಕ್ರಯಪತ್ರ ಬರೆಸಿಕೊಳ್ಳಲು ಸಿದ್ದನಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ಮತ್ತು 2 ರಂತೆ ಕ್ರಯಪತ್ರ ಬರೆಯಿಸಿಕೊಳ್ಳುವ ಯಾವುದೇ ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಕರಾರು ಕಾಲಾವಧಿ ಮೀರಿದ ಕರಾರು ಇದ್ದು ನಿಪಿ 2 ಸೃಷ್ಟಿಸಿದ ಕರಾರು ಇರುವುದರಿಂದ ನನಗೆ ದಾವಾ ಪರಿಹಾರ ಕೇಳಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,ಆನೇಕಲ್.